ಹಾಗೆ ಒಂದು ಲಕ್ಷ ಜನರ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದೇನೆ. ನಾನು ಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರುವಾಗ ತಾವು ಸಭೆಯಿಂದ ವಿಥ್‌ಡ್ರಾ ಮಾಡಿ ಎಂದು ಹೇಳಿದರೆ ಅದನ್ನು ಒಬ್ಬೇ ಮಾಡಬೇಕೆ? ಈ ಮನೆಯ ಹಳೆಯ ರೂಲ್ಸ್ ಪ್ರಕಾರ ಕ್ವಶ್ಚನ್ ಅವರ್ ಅದನಂತರ ಇಂಥ ವಿಚಾರಗಳನ್ನು ಇಲ್ಲಿ ಎತ್ತಬಹುದು. ಆದ್ದರಿಂದ ನಾನು ಈ ವಿಚಾರವನ್ನು ಇಲ್ಲಿ ರೈಸ್ ಮಾಡಲೇಬೇಕು. ಅದಕ್ಕೆ ಒಪ್ಪಿಗೆ ಕೊಡುವುದು, ಅಥವಾ ಬಿಡುವುದು ಅದು ನಿಮಗೆ ಬಿಟ್ಟ ವಿಚಾರ. ನನಗೆ ನೀವು ವಿಥ್‌ಡ್ರಾ ಮಾಡಬೇಕೆಂದು ಹೇಳಿದರೆ ಅದೇನು ನನಗೆ ಪನಿಶ್‌ಮೆಂಟ್ ಕೊಡುವುದೇ? ನೀವು ಹೊಸ ರೂಲ್ಸ್ ಪ್ರಕಾರ ಹೇಳುತ್ತಿದ್ದೀರಿ. ಅದು ನನಗೆ ಸಿಗಲೇ ಇಲ್ಲ.

Mr. SPEAKER.—I request the member Sri Bangarappa to withdraw.

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳುವುದನ್ನು ನಾವು ಕೇಳಬೇಕು. ಅಂದರೆ ನಾವು ಹೇಳುವುದನ್ನು ತಾವು ಏಕೆ ಕೇಳಬಾರದು? ಅವರು ಮಂತ್ರಿಯವರು ಹೇಳಿದರೆಂದು ತಾವು ಕೇಳುತ್ತೀರಾ? ಅವರು ನೀವು ಸೇರಿಕೊಂಡು ಸರ್ಕಾರ ನಡೆಸುತ್ತೀರಾ? ನಾನು ಹೇಳುವುದನ್ನು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ.

Sri S. SIVAPPA.—Sir, he is not disobeying you. ಅವರು ನಿಮ್ಮನ್ನು ಒಬ್ಬೇ ಮಾಡುತ್ತಾರೆ ಜೇರನ್ನು ಡಿಸ್‌ಒಬೇ ಮಾಡುವ ಉದ್ದೇಶ ಅವರಿಗೆ ಇಲ್ಲ. ಹೊಸ ರೂಲ್ ಬಂದಿರುವುದು ಗೊತ್ತಿಲ್ಲದ್ದರಿಂದ ಆ ರೀತಿ ಮಾತನಾಡಿದರೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಅವರು ಮಾತನಾಡಿ ಈ ಸಭೆಯ 15ನಿಮಿಷ ಕಾಲವನ್ನು ತೆಗೆದುಕೊಂಡಿದ್ದಾರೆ ಈ ಸಭೆಯ ಮುಂದಿರುವ ಸೂಚನೆಯಮೇರೆ ಚರ್ಚೆಯನ್ನು ಇಂದೆ ಮುಗಿಸಬೇಕೆಂದು ನಿರ್ಣಯ ಮಾಡಿದ್ದೇವೆ. ಅಂದಮೇಲೆ ಯಾವ ರೀತಿ ಮುಗಿಸಬೇಕು?

ಶ್ರೀ ಎಸ್. ಬಂಗಾರಪ್ಪ.—ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಆದರೂ ನಾನೂ ಈ ಸಭೆಯಿಂದ ವಿಥ್‌ಡ್ರಾ ಮಾಡುವುದು ನನಗೆ ಪನಿಷ್‌ಮೆಂಟ್ ಎಂಬುದಾಗಿ ತಿಳಿಯುತ್ತಿದ್ದೇನೆ. ಒಬ್ಬ ಸದಸ್ಯರ ವಿಚಾರಣೆಗಾಗಿ ಹೊಸರೂಲ್ಸ್ ಕಾಪಿ ಕೊಡದೆ ರೂಲ್ಸ್ ಹೀಗೆ ಹೇಳುತ್ತದೆಯೆಂದು ಹೇಳುತ್ತೀರಿ. ಆದರೂ ... ಡ ಪಾರ್ಲಮೆಂಟರಿ ಮಿನಿಸ್ಟರ್ ಅದನ್ನು ಹೇಳಿದರು. ಈಗ ನಾನು ವಿಥ್‌ಡ್ರಾ ಮಾಡಬೇ... ವುದು ನಿಮಗೆ ಮುಖ್ಯ. ನಾನು ಹೇಳುವ ವಿಷಯವನ್ನು ನಿಲ್ಲಿಸಬೇಕೆಂದು ಜೇರಿಗೆ ಕಾಣುತ್ತಿದೆ. ದಯವಿಟ್ಟು ತಾವು ನನ್ನನ್ನು ವಿಥ್‌ಡ್ರಾ ಮಾಡಬೇಕೆಂದು ಹೇಳುವ ಮಾತನ್ನು ನೀವು ವಿಥ್‌ಡ್ರಾ ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—I have heard the hon. Member. I direct him to withdraw from the House.

ಶ್ರೀ ಎಸ್. ಬಂಗಾರಪ್ಪ.—ಹೊಸ ರೂಲ್ಸ್ ಗೊತ್ತಿಲ್ಲದೆ ಹಳೆಯ ರೂಲ್ಸ್ ಪ್ರಕಾರ ಮಾತನಾಡಿದ್ದು. ತಾವು ಹೇಳಿದ್ದೇ ರೈಟ್. ಈಗ ವಿಥ್‌ಡ್ರಾ ಮಾಡುತ್ತೇನೆ. ನಾವೂ ಕೂಡ ತಮಗೂ ವಿಥ್‌ಡ್ರಾ ಮಾಡಿ ಎಂದು ಹೇಳತಕ್ಕ ಪ್ರಮೇಯ ಮುಂದೆ ಬರುತ್ತದೆ, ಇನ್‌ಕ್ಲೂಡಿಂಗ್‌ದಿ ಪ್ರಸೆಂಟ್ ಸ್ಪೀಕರ್‌ಗೆ ಸಂದರ್ಭ ಬಂದರೆ ಆಗ ನೀವೂ ಹೋಗಬೇಕು.

ಅಧ್ಯಕ್ಷರು.—ಬರಲಿ, ಬಂದಾಗ ತೆಗೆದುಕೊಳ್ಳೋಣ. The hon. member will please withdraw.

(Sri S. Bangarappa withdrew)

Calling attention to a matter of urgent Public Importance

re: **Students' agitation in Hubli-Dharwar City over border dispute.**

Sri K. M. DASANKOP (Dharwar City).—Sir, I call the attention of the Chief Minister to the Students' agitation in Hubli-Dharwar City over border dispute.